# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.

## ಅಸಲು ದಾವಾ ಸಂಖ್ಯೆಃ *310 /2015*

**ವಾದಿ/ಯರುಃ** ಶ್ರೀಮತಿ ಗೌರಮ್ಮ

**-ವಿರುದ್ಧ-**

**ಪ್ರತಿವಾದಿ/ಯರುಃ** ಶ್ರೀಮತಿ ಲಕ್ಷ್ಮಮ್ಮ ಮತ್ತು ಇತರರು

## -ಃವಿವಾದಾಂಶಗಳುಃ-

*1)* ದಾವಾ ಅನುಸೂಚಿತ ಸ್ವತ್ತು ವಾದಿ ಕುಟುಂಬದ ಪಿತ್ರಾರ್ಜಿತ ಸ್ವತ್ತು ಎಂದು ವಾದಿಯು ರುಜುವಾತುಪಡಿಸುತ್ತಾರೆಯೇ*?*

*2)* ದಾವಾ ಅನುಸೂಚಿತ ಸ್ವತ್ತನ್ನು ತನಗೆ ವಿಲೇವಾರಿ ಮಾಡುವ ಹಕ್ಕು ಇಲ್ಲದಿದ್ದಾಗ್ಯೂ *1*ನೇ ಪ್ರತಿವಾದಿಯು ವಿಲೇವಾರಿ ಮಾಡಿರುತ್ತಾರೆಂದು ವಾದಿಯು ರುಜುವಾತುಪಡಿಸುತ್ತಾರೆಯೇ*?*

*3)* ವಾದಿಯು ಪಕ್ಷಗಾರರ ನಡುವಿನ ಸಂಬಂಧವನ್ನು ರುಜುವಾತುಪಡಿಸುತ್ತಾರೆಯೇ*?*

*4)* ಒಟ್ಟು ಕುಟುಂಬದ ಎಲ್ಲಾ ಸ್ವತ್ತುಗಳನ್ನು ಸೇರ್ಪಡೆ ಮಾಡದ ಕಾರಣದಿಂದ ದಾವೆಯು ಅನೂರ್ಜಿತಗೊಳ್ಳುತ್ತದೆ ಎಂದು ಪ್ರತಿವಾದಿಯರು ರುಜುವಾತುಪಡಿಸುತ್ತಾರೆಯೇ*?*

*5)* ವಾದಿಯು ದಾವಾ ಅನುಸೂಚಿತ ಸ್ವತ್ತಿನ ತನ್ನ ಪಾಲಿನ *1/4*ನೇ ಹಿಸ್ಸೆ ಪಡೆಯಲು ಅರ್ಹನೇ*?*

*6)* ದಿಃ*09-03-2015* ರಂದು *8*ನೇ ಪ್ರತಿವಾದಿಯು *9*ನೇ ಪ್ರತಿವಾದಿಗೆ ಜಾರಿಮಾಡಿಕೊಟ್ಟಿರುವ ನೊಂದಣಿ ದಾನಪತ್ರವು ತನಗೆ ಬಂಧನಕಾರಿಯಾಗುವುದಿಲ್ಲವೆಂದು ವಾದಿಯು ರುಜುವಾತುಪಡಿಸುತ್ತಾರೆಯೇ*?*

*7)* ವಾದಿಯು ದಾವೆಯಲ್ಲಿ ಕೋರಿರುವಂತೆ ಪರಿಹಾರವನ್ನು ಪಡೆಯಲು ಅರ್ಹರೇ*?*

*8)* ಹಾಗಿದ್ದಲ್ಲಿ ಯಾವ ಆದೇಶ ಅಥವಾ ಡಿಕ್ರಿ*?*

**ದಿನಾಂಕಃ*5*ನೇ ಜನವರಿ *2018.***

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತರೀಕೆರೆ.**